ಸಿಸಿ ನಂಃ 1668/2021
ಸಿ.ಡಬ್ಲೂ-15/ಪಿ.ಡಬ್ಲೂ-6

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 1668/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಗುರುಲಿಂಗಯ್ಯ ಕುಮಾರಮಠ |
| ತಂದೆಯ ಹೆಸರು | ಃ | ಗುಡ್ಲಯ್ಯ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ಅಳತೆ ಮಾಪನ ಇಲಾಖೆಯಲ್ಲಿ ಕೆಲಸ |
| ವಾಸ ಸ್ಥಳ | ಃ | ಧಾರವಾಡ |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 12-07-2024

**ಮುಖ್ಯ ವಿಚಾರಣೆ ಃ ಮಾನ್ಯ ಹಿ ಸ.ಸ.ಅ ರವರಿಂದ**

1988 ನೇ ಸಾಲಿನಿಂದ ಇಲ್ಲಿಯವರೆಗೆ ನಾನು ನೀರಿಕ್ಷಕರು ಕಾನೂನು ಮಾಪನ ಶಾಸನ ಇಲಾಖೆಯಲ್ಲಿ ಅನುಮತಿ ಕಾಂಟ್ರಾಕ್ಟರಾಗಿ ಕೆಲಸ ಮಾಡುತ್ತಿದ್ದೆನೆ. ವಿದ್ಯಾಗಿರಿ ಪೋಲಿಸ ಠಾಣೆ ಪೋಲಿಸರು ನಮ್ಮ ಇಲಾಖೆಯ ನೀರಿಕ್ಷಕರಿಗೆ ಪತ್ರ ಬರೆದು ಗಾಂಜಾ ತೂಕ ಮಾಡಲು ದಿಃ 16.04.2021 ರಂದು ಬನ್ನಿ ಎಂದು ಕೇಳಿಕೊಂಡಿದ್ದರು.ದಿಃ 16.04.2021 ರಂದು ಧಾರವಾಡದ ಹಳೇ ನ್ಯಾಯಾಲಯದ ಒಂ ದು ಕೊರ್ಟಗೆ ಬನ್ನಿ ಎಂದು ಹೇಳಿದರು ಅದರಂತೆ ನಾನು ಅಳತೆ ಮಾಪನ ತೆಗೆದುಕೊಂಡು ಸದರಿ ನ್ಯಾಯಾಲಯಕ್ಕೆ ಹೋಗಿದ್ದೇನು. ನ್ಯಾಯಾಲಯದಲ್ಲಿ ಒಟ್ಟು 102 ಚೀಟಿಗಳಲ್ಲಿ ಒಟ್ಟು 882 ಗ್ರಾಂ ಗಾಂಜಾ ಇತ್ತು ಅದನ್ನು ನಾನು ಅಳತೆ ಮಾಡಿರುತ್ತೇನೆ. ಸದರಿ 882 ಗ್ರಾಂ ದ ಪೈಕಿ ಪೋಲಿಸರು 100 ಗ್ರಾಂ ಗಾಂಜಾವನ್ನು ಪ್ರತ್ಯೇಕ ತೆಗೆದುಕೊಂಡರು ಅದನ್ನು ವಿಧಿವಿಧಾನ ಪರೀಕ್ಷಾಲಯಕ್ಕೆ ಕಳುಹಿಸುವ ಸಲುವಾಗಿ ಪ್ರತ್ಯೇಕ ತೆಗೆದುಕೊಂಡು ಅದನ್ನು ಒಂದು ಬಟ್ಟೆಯಲ್ಲಿ ಪ್ಯಾಕ ಮಾಡಿ ಸೀಲ್ ಮಾಡಿರುತ್ತಾರೆ. ನಾನು ಗಾಂಜಾವನ್ನು ತೂಕ ಮಾಡುವ ಸಮಯದಲ್ಲಿ ಪೋಲಿಸರು ನಾನು ನ್ಯಾಯಾಧೀಶರು ಹಾಜರಿದ್ದೇವು. ಈಗ ನಾನು ನೋಡುತ್ತಿರುವ ಪೊಟೋಗಳನ್ನು ಗಾಜಾ ತೂಕ ಮಾಡಿರುವ ಸಮಯದಲ್ಲಿ ನ್ಯಾಯಾಧೀಶರ ಸಮಕ್ಷಮ ತೆಗೆದ ಪೊಟೋಗಳಾಗಿರುತ್ತವೆ ಅವುಗಳನ್ನು ನಿ.ಪಿ 7 ಮತ್ತು 8 ಎಂದು ಗುರುತಿಸಲಾಯಿತು.

ಸಿಸಿ ನಂಃ 1668/2021
ಸಿ.ಡಬ್ಲೂ-15/ಪಿ.ಡಬ್ಲೂ-6

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.